ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಮಿಪ್ ಆದ್ದು. [ನಂ. 18.

ಬೆಂಗಳೂರು, ಗುರುವಾರ, ಮೇ ತಾ|| 6, ಸರ್ 1909.

II ನೆ ಭಾಗ.

ಇಂಡ್ಸ್ಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫೈನ್ಯಾನ್ಷಿಯಲ್ ಇಲಾಖೆ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖಜಾನೆಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇರ್ಷಗಳನ್ನು ಮೈಸೂರು ಸೀಮೆಯ ಶ್ರೀಮಂ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇರ್ಷನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.

ಮತ್ತು 3. ಹುಂಡಿಗೆ ಅಪ್ಲಿಕೇರ್ಷ ಹಾಕುವವರ ಹೆಸರು ಮತ್ತು ವಿಳಾಸ.

2. 500 ರೂಪಾಯಿಗಳಿಗಿಂತ ಕಡಿಮೆ ಮೊಬಲಗಿಗೆ ಹುಂಡಿಯು ಕೊಡಲ್ಪಡುವದಿಲ್ಲ.

3. ಅಪ್ಲಿಕೇಷನನ್ನು ಅಂಗೀಕರಿಸುವ ಪಕ್ಷದಲ್ಲಿ ಆ ವಿಚಾರವು ಅಪ್ಲಿಕೇರ್ಷ ಹಾಕಿರುವವರಿಗೆ ತಿಳಿಸಲ್ಪಡುವದಲ್ಲದೆ, ಸ್ಟೇಟ್ ಹುಜೂರು ಟ್ರೆಜರಿ ಆಫಿಸರಿಗೆ ಹುಂಡಿಯ ಮೊಬಲಗನ್ನು ಮತ್ತು ಕೆಳಗೆ ನಮೂದಿಸಿರುವ ದರದಮೇರೆ ಕಮಿಷನನ್ನೂ ತೆಗದು ಕ್ಕೊಂಡು ಹುಂಡಿಯನ್ನು ಕೊಡುವದಕ್ಕೆ ಅಧಿಕಾರವು ಕೊಡಲ್ಪಡುತ್ತದೆ.

ಹುಂಡಿ ಕೊಡುವ ಖಜಾನೆ ಹೆಸರು.	ಹಣ ಪಾವತಿಯಾಗಬೇಕಾದ ಖಜಾನೆ ಹೆಸರು.	ಕಮಿರ್ಷ ದರ.
ಸ್ಟೇಟ್ ಹುಜೂರ್.	ಕೋಲಾರ. ತುಮಕೂರು. ಶಿವಮೊಗ್ಗ. ಕಡೂರು. ಚಿತ್ರದುರ್ಗ. ಮೈಸೂರು. ಹಾಸನ.	ಶೇಕಡ $\frac{1}{16}$

ಜೆ. ಎಸ್. ಚಕ್ರವರ್ತಿ,
ಕಂಟ್ರೋಲರ್.